ಚಲಿಸಲಾಗದಷ್ಟು ಗಟ್ಟಿಯಾಗಿ ನನ್ನ ಪಾದಗಳನ್ನು ಈ ಬೋದಿಗೆಯ ಮೇಲೆ ಬೆಸೆಯಲಾಗಿದೆ.'

'ಆದರೆ ನನಗಾಗಿ ನನ್ನ ಗೆಳೆಯರು ಇಜಿಪ್ಟ್‌ನಲ್ಲಿ ದಾರಿ ಕಾಯುತ್ತಿದ್ದಾರೆ. ನೈಲ್ ನದಿಯ ಮೇಲೆಕೆಳಗೆ ಹಾರುತ್ತ ಅವರು ಅಲ್ಲಿರುವ ದೊಡ್ಡ ನೈದಿಲೆಗಳ ಜೊತೆ ಸಲ್ಲಾಪ ನಡೆಸಿದ್ದಾರೆ. ಇಷ್ಟರಲ್ಲೇ ಅವರು ಮಹಾರಾಜನ ಸಮಾಧಿ ಇರುವ ಸ್ಥಳಕ್ಕೆ ಹೋಗಿ ಮಲಗಲಿದ್ದಾರೆ. ಆ ಮಹಾರಾಜ ವರ್ಣಲೇಪಿತ ಶವಪೆಟ್ಟಿಗೆಯೊಳಗಿದ್ದಾನೆ. ಹಳದಿ ವರ್ಣದ ಲಿನೆನ್ ಬಟ್ಟೆಯನ್ನು ಅವನಿಗೆ ಸುತ್ತಲಾಗಿದೆ. ಹಾಗೂ ಆತನ ದೇಹಕ್ಕೆ ಮುಲಾಮು ಬಳಿಯಲಾಗಿದೆ. ಆತನ ಕೊರಳಲ್ಲಿ ತೆಳು ಹಸಿರು ವರ್ಣದ ರತ್ನದ ಹಾರವಿದೆ. ಆತನ ಕೈಗಳು ಸುರುಟಿದ ಒಣ ಎಲೆಗಳಂತಿವೆ.'

'ಸ್ವಾಲೋ, ಸ್ವಾಲೋ, ಪುಟ್ಟ ಸ್ವಾಲೋ, ಈ ಒಂದು ರಾತ್ರಿ ನನ್ನ ವಾರ್ತೆಗಾರನಾಗಿ ನನ್ನ ಜೊತೆ ಕಳೆಯಲಾರೆಯಾ?' ಎಂದು ರಾಜಕುಮಾರ ಅಂಗಲಾಚಿದ. ಅನಾರೋಗ್ಯದಿಂದ ಬಳಲುತ್ತಿರುವ ಆ ಹುಡುಗನಿಗೆ ತುಂಬ ಬಾಯಾರಿಕೆಯಾಗಿದೆ. ಆತನ ತಾಯಿ ತುಂಬ ದುಃಖಿತಳಾಗಿದ್ದಾಳೆ.

'ನನಗೆ ಹುಡುಗರನ್ನು ಕಂಡರೆ ಆಗುವುದಿಲ್ಲ. ಕಳೆದ ಬೇಸಿಗೆಯಲ್ಲಿ ನಾನು ನದಿ ದಡದಲ್ಲಿ ತಂಗಿದ್ದಾಗ, ಕಾರ್ಖಾನೆ ಮಾಲೀಕನ ಮಕ್ಕಳಾದ ಇಬ್ಬರು ಕಿಲಾಡಿ ಹುಡುಗರು ಸತತವಾಗಿ ನನ್ನತ್ತ ಕಲ್ಲು ಎಸೆಯುತ್ತಿದ್ದರು. ಅವರು ಎಸೆದ ಕಲ್ಲುಗಳು ನನಗೆ ತಾಕಲು ಶಕ್ಯವಿರಲಿಲ್ಲ. ಏಕೆಂದರೆ ನಾವು ಸ್ವಾಲೋ ಸಂತತಿಯವರು. ಹಾರಾಡುವುದರಲ್ಲಿ ನಿಸ್ಸೀಮರು. ಆದರೆ ಆ ಹುಡುಗರ ಕೃತ್ಯ ನನ್ನ ಪಾಲಿಗೆ ಅವಮಾನಕಾರಿಯಾಗಿತ್ತು.'

ಅದರ ಮಾತು ಕೇಳಿ ಸುಖಿ ರಾಜಕುಮಾರನ ಮುಖ ದುಃಖದಿಂದ ಇನ್ನಷ್ಟು ಬಾಡಿತು. ಆತನ ಆ ಸ್ಥಿತಿಗೆ ಮರುಕಪಟ್ಟು ಸ್ವಾಲೋ ಹೇಳಿತು, 'ಇಲ್ಲಿ ಬಹಳ ಚಳಿ ಇದೆ. ಇದೊಂದು ರಾತ್ರಿ ಮಾತ್ರ ನಾನು ನಿನ್ನ ವಾರ್ತೆಗಾರನಾಗಿ ಇಲ್ಲಿ ಉಳಿದುಕೊಳ್ಳುವೆ'.

'ಧನ್ಯವಾದಗಳು, ಪುಟ್ಟ ಸ್ವಾಲೋ' ಎಂದ ರಾಜಕುಮಾರ.

ಆತನ ಆಣತಿಯಂತೆ ಖಡ್ಗದ ಹಿಡಿಕೆಯ ಮೇಲಿದ್ದ ಮಾಣಿಕ್ಯವನ್ನು ಕಿತ್ತು ಕೊಕ್ಕಿನಲ್ಲಿ ಹಿಡಿದುಕೊಂಡು ಸ್ವಾಲೋ ನಗರದ ಮೇಲೆ ಹಾರಿ ಹೋಯಿತು. ಅದು ಕ್ಯಾಥೆಡ್ರಲ್ ಚರ್ಚ್ ದಾಟಿತು, ಆ ಚರ್ಚಿನ ಮೇಲೆ ಅಮೃತ ಶಿಲೆಯಲ್ಲಿ ಕೆತ್ತಿದ ದೇವದೂತರ ವಿಗ್ರಹಗಳಿದ್ದವು. ಅದು ಅರಮನೆಯ ಮೇಲೆ ಹಾರುವಾಗ ನರ್ತಿಸುವ ಸದ್ದು ಕೇಳಿಸಿತು. ಆ ಅರಮನೆಯ ಬಾಲ್ಕನಿಯ ಮೇಲೆ ಓರ್ವ ಸುಂದರ ಹುಡುಗಿ ತನ್ನ ಪ್ರಿಯತಮನ ಜೊತೆ ನಿಂತಿದ್ದಳು. ಆತ ಆಕೆಗೆ ಹೇಳಿದ, 'ನಕ್ಷತ್ರಗಳು ಅದೆಷ್ಟು ಅದ್ಭುತವಾಗಿವೆ! ಪ್ರೇಮದ ಶಕ್ತಿ ಕೂಡ ಅದೆಷ್ಟು ಅದ್ಭುತ!' ನಂತರ ಆಕೆ ಆತನಿಗೆ ಹೇಳಿದಳು: 'ರಾಜದರ್ಬಾರಿನ ನೃತ್ಯಕೂಟಕ್ಕಾಗಿ ಬಹುಶಃ ನನ್ನ ಉಡುಪು ಸಿದ್ಧವಾಗಿರಬಹುದು. ಅವುಗಳ ಮೇಲೆ ಆಕರ್ಷಕ ಹೂಗಳ ಕಸೂತಿ ಹಾಕುವಂತೆ ನಾನು ಸೂಚಿಸಿದ್ದೇನೆ. ಆದರೆ ಸಿಂಪಿಗರು ತುಂಬ ಸೋಮಾರಿಗಳು.'

ಆ ಹಕ್ಕಿ ನದಿಯ ಮೇಲೆ ಹಾರುವಾಗ ದೋಣಿಗಳ ಹಾಯಿಸ್ತಂಭಗಳ ಮೇಲೆ ಕಂದೀಲುಗಳನ್ನು ತೂಗು ಹಾಕಿರುವುದನ್ನು ನೋಡಿತು. ನಂತರ ಯಹೂದ್ಯರ ಬಡಾವಣೆಯ ಮೇಲೆ ಹಾರಿತು, ಅಲ್ಲಿ ವಯಸ್ಸಾದ ಯಹೂದಿಗಳು ಪರಸ್ಪರ ವಂಚನೆಯ ವ್ಯವಹಾರ ನಡೆಸುತ್ತಿರುವುದನ್ನು ನೋಡಿತು. ಕೊನೆಗೆ ಆ ಬಡ ಸಿಂಪಿಗಳ ಮನೆಗೆ ಬಂದು ಒಳಗೆ ಇಣಿಕಿತು. ಅಲ್ಲಿದ್ದ ಹುಡುಗ ಜ್ವರದಿಂದ ನಡುಗುತ್ತಿದ್ದ. ತುಂಬಾ ದಣಿದಿದ್ದ ಆತನ ತಾಯಿಗೆ ನಿದ್ರೆ ಆವರಿಸಿತ್ತು. ಸ್ವಾಲೋ ಹಕ್ಕಿ ಕೆಳಗೆ ಜಿಗಿದು, ತಾನು ತಂದ ದೊಡ್ಡ ಮಾಣಿಕ್ಯವನ್ನು ಮೇಜಿನ ಮೇಲಿದ್ದ ಬೆರಳುಗವಸಿನ ಬದಿಗೆ